ಶ್ರೀ ಕುಂದೂರು ರುದ್ರಪ್ಪ.—ನಾನು ನೊಂದು ಕೇಳಿಕೊಳ್ಳುತ್ತಿದ್ದೇನೆ. ಅಲ್ಲಿ ಎಲ್ಲ ಮಂತ್ರಿಗಳೂ ಬಂದು ನೋಡಿದ್ದಾರೆ. ಆದರೂ ಇದುವರೆಗೂ ಏನು ಕೆಲಸವೂ ಆಗಿಲ್ಲ. ಪಬ್ಲಿಕ್ ವರ್ಕ್ಸ್ ಮಂತ್ರಿಗಳು, ಮುಖ್ಯಮಂತ್ರಿಗಳು ತಾವು, ಎಲ್ಲರೂ ನೋಡಿದ್ದೀರಿ. ಅಲ್ಲಿನ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. 1958 ರಲ್ಲಿ ಶ್ರೀಮತ್ ಚನ್ನಬಸಪ್ಪನವರು ವಾಗ್ದಾನ ಮಾಡಿದರು. ಇದು 16 ಹಳ್ಳಿಗಳಿಗೆ ಸಂಬಂಧಪಟ್ಟ ಪ್ರಶ್ನೆ...

Mr. DEPUTY SPEAKER.—The Hon'ble Member is making a speech.

Sri S. M. KRISHNA.—I rise to a point of order, Sir. Is this the occasion for making a speech? The Hon'ble Member must be called to order.

Mr. DEPUTY SPEAKER.—I have called him to order.

Mr. DEPUTY SPEAKER.—The question No. 170 is held over, as the Education Minister is not present.

Sri S. SIVAPPA.—Sir, there is a Minister and a Deputy Minister and both of them are not present here. This has become a routine affair. At least one of them could have been present.

Mr. DEPUTY SPEAKER.—After they come, we will know the reason for their absence.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಸಭೆಗಾಗಲೀ ತಮಗಾಗಲೀ ಸರಿಯಾದ ಅಧಿಕಾರವಿಲ್ಲವೆ? ಈ ವಿಷಯವನ್ನು ನೂರಾರು ಸಾರಿ ಗಮನಕ್ಕೆ ತಂದಿದ್ದೇವೆ. ಪಂಜಾಬಿನಲ್ಲಾದಂತಾಗುತ್ತದೆ ಎಂಬ ಭಯವೇನಾದರೂ ಇದೆಯೆ? ಮಂತ್ರಿಗಳೂ ಇಲ್ಲ, ಉಪಮಂತ್ರಿಗಳೂ ಇಲ್ಲ; ಕಡೆಯ ಪಕ್ಷ ತಮಗಾದರೂ ತಿಳಿಸಬೇಡವೆ?

Sanction of bridge across Mavinahole in Sagar Taluk.

*Q.—217. V. S. LAKSHMIKANTHAPPA (Sagar).—

Will the Government be pleased to state :—

(*a*) the date of sanction of bridge across Mavinahole in Sagar Taluk ;

(*b*) the date of receipt of tender for construction ;

(*c*) the probable time within which the work order for the construction would be given ?

A.—Sri G. B. SHANKAR RAO (Parliamentary Secretary to the Minister for Public Works).—

(*a*) 13-7-1956.

(*b*) 20-9-1961.

(*c*) After calling for fresh tenders for the modified estimate and fixing agency.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಇದು 1956 ರಲ್ಲಿ ಮಂಜೂರಾಗಿ 1961 ನೆಯ ಇಸವಿಯವರೆಗೂ ಹಾಗೆಯೇ ಇದ್ದು ಟೆಂಡರು ಕರೆಯದೇಯಿರುವುದಕ್ಕೆ, ತಡಮಾಡುವುದಕ್ಕೆ ಸರಕಾರಕ್ಕಿದ್ದ ಪ್ರಬಲ ಕಾರಣವೇನು?

ಶ್ರೀ ಜಿ. ಬಿ. ಶಂಕರರಾವ್.—3-9-1956 ರಿಂದ 5-6-1961 ರ ವರೆಗೆ ಹನ್ನೆರಡು ಸಾರಿ ಟೆಂಡರುಗಳನ್ನು ಕರೆದಿದ್ದೆವು.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—1961ನೆಯ ಇಸವಿಯಲ್ಲಿ ಟೆಂಡರ್ ಕರೆದು 1962 ರಲ್ಲಿ ವರ್ಕ್ ಆರ್ಡರ್ ಕೊಡುತ್ತೇವೆಂದು ಸರಕಾರದಿಂದ ಉತ್ತರ ಬಂತು, ಈಗ ಮಾಡಿಫೈಡ್ ಎಸ್ಟಿಮೇಟ್ ಮಾಡಿದ್ದೇವೆ ಪುನಃ ಟೆಂಡರ್ ಕರೆಯುತ್ತೇವೆ ಎಂದು ಹೇಳಿದ್ದೀರಿ ಇದರ ಉದ್ದೇಶವೇನು ?

ಶ್ರೀ ಜಿ. ಬಿ. ಶಂಕರರಾವ್.—ಕೊನೆಯ ಸಾರಿ ಟೆಂಡರು ಕರೆದಾಗ, ಅಲ್ಲಿ ಮಾಡಬೇಕಾಗಿದ್ದ ಕೆಲಸಗಳನ್ನು ನೋಡಿ ಪುನಃ ಪರಿಶೀಲನೆ ಮಾಡಬೇಕಾಯ ತು, ಅಂದಾಜನ್ನು ರಿವೈಸ್ ಮಾಡಬೇಕಾಯಿತು. ಕೆಲಸವನ್ನು ತೆಗೆದುಕೊಳ್ಳಲು ಅಡ್ಮಿನಿಸ್ಟ್ರೇಟಿವ್ ಅಪ್ರೂವರ್ ಆಗಬೇಕಾಗಿರುವುದರಿಂದ ಇನ್ನೂ ಕೆಲಸ ಪ್ರಾರಂಭವಾಗಿಲ್ಲ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಮೊದಲು ಅಂದಾಜೆಷ್ಟು, ಮಾಡಿಫೈಡ್ ಅಂದಾಜೆಷ್ಟು, ಎಷ್ಟು ದಿವಸಗಳಲ್ಲಿ ಕೆಲಸ ಮಾಡುತ್ತಾರೆ ?

ಶ್ರೀ ಜಿ. ಬಿ. ಶಂಕರರಾವ್.—ಮೊದಲು ಅಂದಾಜು 80,000 ರೂಪಾಯಿ, ಮಾಡಿಫೈಡ್ ಅಂದಾಜು 2,33,500 ರೂಪಾಯಿ. ಹಣ ಒದಗಿಸಿದ ನಂತರ, ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಎಷ್ಟು ದಿವಸದಲ್ಲಿ ಸಾಧ್ಯವೆಂದು ನೋಡುತ್ತೇವೆ.

ಶ್ರೀ ಜಿ. ರಾಮೇಗೌಡ.—ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಎಷ್ಟು ದಿವಸದಲ್ಲಿ ಕೊಡುವುದು ಮತ್ತು ಯಾರು ಕೊಡುವುದು ?

ಶ್ರೀ ಜಿ. ಬಿ. ಶಂಕರರಾವ್.—ಸರಕಾರ ಕೊಡಬೇಕು ಈ ವರ್ಷದ ಅಂದಾಜಿನಲ್ಲಿ ಸೇರಿಸದೇ ಯಿರುವುದನ್ನು ಪುನಃ ಸೇರಿಸಿ ಮಂಜೂರಾತಿ ಕೊಡಬೇಕಾಗುತ್ತದೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಈ ವರ್ಷ ಪುನಃ ಅಂದಾಜಿಗೆ ಸೇರಿಸಿ ಮಂಜೂರು ಮಾಡ ಬೇಕೆಂದು ಹೇಳಿದಿರಿ ಹಿಂದಿನ ವರ್ಷ ಬಡ್ಜೆಟ್ಟಿನಲ್ಲಿ ಸೇರಿಸಲಾಗಿತ್ತು ಅಲ್ಲವೆ ?

ಶ್ರೀ ಜಿ. ಬಿ. ಶಂಕರರಾವ್.—ಹಿಂದೆ ಸೇರಿತ್ತು, ಹಣಕಾಸಿನ ಪರಿಸ್ಥಿತಿಯಿಂದಾಗಿ ಈ ವರ್ಷ ಇದನ್ನು ಸೇರಿಸಲಾಗಲಿಲ್ಲ.

Sri B. D. JATTI.—If he looks into the budget he will find that it is included.

Sri V. S. LAKSHMIKANTHAPPA.—I have seen and it is not included.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಎಸ್ಟಿಮೇಟು ರಿವೈಜ್ ಮಾಡಲು ಅದು ಎರಡು ಲಕ್ಷಕ್ಕೆ ಹೋಯಿತು, ಹಾಗಾದರೆ ಅಡ್ಮಿನಿಸ್ಟ್ರೇಟಿವ್ ಅಪ್ರೂವರ್ ಕೊಡುವಾಗ್ಗೆ ಎಷ್ಟು ಆಗಬಹುದು ?

ಶ್ರೀ ಜಿ. ಬಿ. ಶಂಕರರಾವ್.—ಹಾಗೆ ಗೆಸ್ ಮಾಡಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಎಲ್. ಗೌಡ.—ಈಗತಾನೆ ಅರ್ಥಮಂತ್ರಿಗಳು ಅದು ಲಸ್ಟಿನಲ್ಲಿ ಸೇರಿದೆ ಎಂದು ಹೇಳಿದರು. ಹಾಗಾದರೆ ಈ ಕೆಲಸ ಬೇಗ ಮಾಡಿಸಿಕೊಡುತ್ತೀರಾ ?

Sri B. D. JATTI.—Lump sum provision has been made for works which are costing less than Rs. 1 lakh each and a list will be placed on the table of the House of such works.

Reduction of Tuition Fees in various Colleges affiliated to Mysore and Karnataka Universities.

*Q.—244. Sri G. DUGGAPPA(Holalkere).—

Will the Government be pleased to state :—

(*a*) whether they have reduced the rate of tuition fee in various colleges affiliated to Mysore and Karnataka Universities recently ;

(*b*) whether they have consulted the Karnataka and Mysore Universities while doing so ?